# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2012–13ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ಕೇಂದ್ರ ಹಾಗೂ ರಾಜ್ಯ ಸಹಾಯಧನ ಅನುದಾನ ಬಿಡುಗಡೆ ಕುರಿತು

ಓದಲಾಗಿದೆ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5–05/2012–ಬಿಇ(ಆರ್–2) – ದಿನಾಂಕ 28.08.2012.

**ಪ್ರಸ್ತಾವನೆ :**

ಓದಲಾದ ಪತ್ರದಲ್ಲಿ 2012–13ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ₹ 570.00 ಲಕ್ಷಗಳನ್ನು ಕೇಂದ್ರ ಸಹಾಯಧನವನ್ನಾಗಿ ಬಿಡುಗಡೆ ಮಾಡಿದೆ.

2012–13ನೇ ಸಾಲಿನ ಆಯವ್ಯಯದ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ **2810–60–196–6–01(ಯೋಜನೆ)ರಡಿ** ಒದಗಿಸಲಾದ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುದಾನ ಸೇರಿದಂತೆ ಒಟ್ಟಾರೆ ₹ 1495.20 ಲಕ್ಷಗಳಲ್ಲಿ ಈಗಾಗಲೇ ₹ 241.45 ಲಕ್ಷಗಳನ್ನು ಹಿಂದಿನ ಸಾಲುಗಳಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಬಾಕಿ ಪಾವತಿಗಾಗಿ ಬಿಡುಗಡೆ ಮಾಡಲಾಗಿದ್ದು, ₹ 1253.75 ಲಕ್ಷಗಳು ಆಯವ್ಯಯ ಹಂಚಿಕೆಯಲ್ಲಿ ಲಭ್ಯವಿರುತ್ತದೆ.

ಈ ಪೈಕಿ ₹ 570.00 ಲಕ್ಷ ಕೇಂದ್ರ ಸಹಾಯಧನವನ್ನಾಗಿ ಮತ್ತು ₹ 220.68 ಲಕ್ಷ ರಾಜ್ಯ ಸಹಾಯಧನವನ್ನಾಗಿ ಅಂದರೆ ಒಟ್ಟಾರೆಯಾಗಿ ₹ 790.68 ಲಕ್ಷಗಳನ್ನು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 46 ಜೈಅಯೋ 2012, ಬೆಂಗಳೂರು, ದಿನಾಂಕ 17.10.2012</u>**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2012–13ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದ **ಲೆಕ್ಕ ಶೀರ್ಷಿಕೆ 2810–60–196–6–01ರಡಿ (ಯೋಜನೆ)ಯಡಿ** ಕೇಂದ್ರ ಸಹಾಯಧನ ₹ 570.00ಲಕ್ಷ ಹಾಗೂ ರಾಜ್ಯ ಸಹಾಯಧನ ₹ 220.68 ಲಕ್ಷ **ಅಂದರೆ ಒಟ್ಟಾರೆಯಾಗಿ** ₹ 790.68 ಲಕ್ಷಗಳನ್ನು **(ಏಳು ನೂರಾ ತೊಂಬತ್ತು ಲಕ್ಷದ ಅರವತ್ತೆಂಟು ಸಾವಿರಗಳು ಮಾತ್ರ)** ಇದರೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಹಂಚಿಕೆ ಮಾಡಲಾದಂತೆ ಬಿಡುಗಡೆ ಮಾಡಿದೆ.

**<u>ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು 2012–13ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಕೇಂದ್ರ ಸಹಾಯಧನ ಬಾಕಿ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.</u>**

ಬಿಡುಗಡೆ ಮಾಡಿದ ಅನುದಾನವನ್ನು **ಲೆಕ್ಕ ಶೀರ್ಷಿಕೆ 2810–60–196–6–01ರಡಿ(ಯೋಜನೆ)** ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 112 ಪಿಬಿಎಸ್ 2012 ದಿನಾಂಕ 08.10.2012 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎಂ.ದೀಪಾ) 17/10/12
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ , ಬೆಂಗಳೂರು
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ(ಅಭಿವೃದ್ಧಿ)/ಮುಖ್ಯ ಲೆಕ್ಕಾಧಿಕಾರಿಗಳು,
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
5. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು,
6. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
7. ಖಜಾನೆಗಳ ಉಪನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು
8. ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ:49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜಭವನ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
10. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ

ದಿನಾಂಕ 17.10.2012 ಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಲಾದ ಅನುದಾನ ( ರೂ.ಲಕ್ಷಗಳಲ್ಲಿ ) | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | ಬಾಗಲಕೋಟೆ | 16.40 | 6.60 | 22.99 |
| 2 | ಬೆಂಗಳೂರು(ಗ್ರಾ) | 15.45 | 6.21 | 21.66 |
| 3 | ಬೆಂಗಳೂರು(ನಗರ) | 16.40 | 6.60 | 22.99 |
| 4 | ಬೆಳಗಾಂ | 170.96 | 65.96 | 236.92 |
| 5 | ಬಳ್ಳಾರಿ | 7.13 | 2.87 | 10.00 |
| 6 | ಬೀದರ್ | 4.75 | 1.91 | 6.66 |
| 7 | ಬಿಜಾಪುರ | 16.40 | 6.60 | 22.99 |
| 8 | ಚಾಮರಾಜನಗರ | 5.94 | 2.39 | 8.33 |
| 9 | ಚಿಕ್ಕಮಗಳೂರು | 16.63 | 6.69 | 23.32 |
| 10 | ಚಿಕ್ಕಬಳ್ಳಾಪುರ | 9.84 | 3.96 | 13.79 |
| 11 | ಚಿತ್ರದುರ್ಗ | 8.17 | 3.29 | 11.46 |
| 12 | ದಕ್ಷಿಣ ಕನ್ನಡ | 16.40 | 6.60 | 22.99 |
| 13 | ದಾವಣಗೆರೆ | 16.40 | 6.60 | 22.99 |
| 14 | ಧಾರವಾಢ | 14.26 | 5.74 | 19.99 |
| 15 | ಗದಗ | 7.13 | 2.87 | 10.00 |
| 16 | ಗುಲ್ಬರ್ಗಾ | 7.13 | 2.87 | 10.00 |
| 17 | ಹಾಸನ | 35.64 | 14.34 | 49.98 |
| 18 | ಹಾವೇರಿ | 8.17 | 3.29 | 11.46 |
| 19 | ಕೊಡಗು | 8.17 | 3.29 | 11.46 |
| 20 | ಕೋಲಾರ | 3.54 | 1.34 | 4.88 |
| 21 | ಕೊಪ್ಪಳ | 15.54 | 6.25 | 21.79 |
| 22 | ಮಂಡ್ಯ | 15.45 | 6.21 | 21.66 |
| 23 | ಮೈಸೂರು | 32.79 | 13.19 | 45.98 |
| 24 | ರಾಮನಗರ | 3.00 | 0.00 | 3.00 |
| 25 | ರಾಯಚೂರು | 16.40 | 6.60 | 22.99 |
| 26 | ಶಿವಮೊಗ್ಗ | 47.52 | 19.12 | 66.64 |
| 27 | ತುಮಕೂರು | 19.48 | 3.72 | 23.20 |
| 28 | ಉಡುಪಿ | 1.00 | 0.00 | 1.00 |
| 29 | ಉತ್ತರ ಕನ್ನಡ | 9.74 | 3.92 | 13.66 |
| 30 | ಯಾದಗಿರ್ | 4.18 | 1.68 | 5.86 |
| | ಒಟ್ಟು | **570.00** | **220.68** | **790.68** |

(ಎಂ.ದೀಪಾ)

ನಿರ್ದೇಶಕರು(ಗ್ರಾಮೂಸೌ-2) ಹಾಗೂ

ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ